# ಬಾಷ್‌ನೊಂದಿಗೆ ಎನ್‌ಐಟಿಕೆ ಒಪ್ಪಂದ

ಮಂಗಳೂರು: ಎನ್‌ಐಟಿಕೆಯ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗವು ಉದ್ದಿಮೆ ಪ್ರಾಯೋಜಿತ ಸ್ನಾತಕೋತ್ತರ ಪದವಿ ಯನ್ನು (ಎಂ-ಟೆಕ್) ಪ್ರಾರಂಭಿಸಲು ಎನ್‌ಐಟಿಕೆ ಸುರತ್ಕಲ್ ಮತ್ತು ಬಾಷ್ ಗ್ಲೋಬಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್ ಪ್ರೈವೇಟ್‌ಲಿ., ಬೆಂಗಳೂರಿನೊಂದಿಗೆ ಸೆಪ್ಟೆಂಬರ್ 16, 2022ರಂದು ಒಪ್ಪಂದಕ್ಕೆ ಸಹಿ ಹಾಕಿದೆ.

ಇದು ಎನ್‌ಐಟಿಕೆ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗವು ನೀಡುವ ಎರಡನೇ ಸ್ನಾತಕೋತ್ತರ ಪದವಿಯ ವಿಭಾಗ. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗವು ಎನ್‌ಐಟಿಕೆ ದೊಡ್ಡ ವಿಭಾಗಗಳಲ್ಲಿ ಒಂದಾಗಿದೆ.ಕಸ್ಟಮೈಸ್ ಮಾಡಿದ ಸ್ನಾತಕೋತ್ತರ ಪದವಿಯು ಎನ್‌ಐಟಿಕೆಯ ಚೌಕಟ್ಟಿನ ಆಧಾರದ ಮೇಲೆ ಮೊದಲ ಬಾರಿ ಪ್ರಾರಂಭಿಸಿದ ಸ್ನಾತಕೋತ್ತರ ಪದವಿಯ ವಿಭಾಗ.ಬೆಂಗಳೂರಿನ ಬಾಷ್ ಗ್ಲೋಬಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್ ಪ್ರೈ.ಲಿ.,ನೊಂದಿಗೆ ಸಮಾಲೋಚಿಸಿ ವಿನ್ಯಾಸಗೊಳಿಸಲಾದ ಕಾರ್ಯಕ್ರಮವು ಪವರ್ ಎಲೆಕ್ಟ್ರಾನಿಕ್ಸ್ ಮತ್ತು ಕಂಟ್ರೋಲ್ ಫಾರ್ ಎಲೆಕ್ಟ್ರಿಕ್ ವೆಹಿಕಲ್‌ನ ಪ್ರಮುಖ ವಿಷಯಗಳನ್ನೊಳಗೊಂಡ ಬಲವಾದ ಸೈದ್ಧಾಂತಿಕ ಮತ್ತು ಪ್ರಯೋಗಾಲಯ ಕೋರ್ಸ್‌ಗಳನ್ನು ಹೊಂದಿರುತ್ತದೆ

SamyuktaKarnataka,
Date:24/09/22,P.No03